ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/01/ಇಎಸ್‌ಟಿ 2(ಬಿ)/2019-20 / 958

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು -560001,
ದಿನಾಂಕ: 03.09.2019.

## ಸುತ್ತೋಲೆ

**ವಿಷಯ:** ಸರ್ಕಾರಿ ಪಾಲಿಟೆಕ್ನಿಕ್ / ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಅರೆಕಾಲಿಕ/ಅತಿಥಿ ಉಪನ್ಯಾಸಕರ ನೇಮಕಾತಿ ಮಾಡಿಕೊಳ್ಳುವ ಕುರಿತು.

**ಉಲ್ಲೇಖ:** ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ/01/ಇಎಸ್‌ಟಿ 2(ಬಿ)/2007-08, ದಿನಾಂಕ: 27.04.2007.

*-*-*-*

ಉಲ್ಲೇಖಿತ ಈ ಕಛೇರಿಯ ಸುತ್ತೋಲೆಯಲ್ಲಿ ಅರೆಕಾಲಿಕ ಉಪನ್ಯಾಸಕರ ನೇಮಕಾತಿಗಳನ್ನು ಮಾಡಿಕೊಳ್ಳುವ ಸಂದರ್ಭಗಳಲ್ಲಿ ಅನುಸರಿಸಬೇಕಾದ ಕ್ರಮದ ಬಗ್ಗೆ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ. ಆದರೂ ಕೆಲವು ಸಂಸ್ಥೆಗಳಿಂದ ಈ ಮಾರ್ಗಸೂಚಿಯನ್ನು ಪಾಲಿಸದೆ ಅರೆಕಾಲಿಕ ಉಪನ್ಯಾಸಕರ ನೇಮಕಾತಿಗಳನ್ನು ಮಾಡಿಕೊಂಡು ಅನುಮೋದನೆ ಕೋರುತ್ತಿರುವುದನ್ನು ಗಮನಿಸಲಾಗಿದೆ. ಅರೆಕಾಲಿಕ ಅತಿಥಿ ಉಪನ್ಯಾಸಕರ ನೇಮಕಾತಿ ಅನುಮೋದನೆಗಾಗಿ ನಿರ್ದೇಶನಾಲಯಕ್ಕೆ ಸಲ್ಲಿಸಲಾಗುತ್ತಿರುವ ಪ್ರಸ್ತಾವನೆಗಳಲ್ಲಿ ಅಪೂರ್ಣ ಮಾಹಿತಿ ಸಲ್ಲಿಕೆಯಾಗುತ್ತಿರುವುದು ಹಾಗೂ ನೇಮಕಾತಿ ಮಾಡಿಕೊಂಡ ದಿನಾಂಕದಿಂದ ಬಹಳಷ್ಟು ತಡವಾಗಿ ಪ್ರಸ್ತಾವನೆ ಸಲ್ಲಿಸಲಾಗುತ್ತಿರುವುದನ್ನು ಗಮನಿಸಲಾಗಿದೆ. ಅಲ್ಲದೇ ಅರೆಕಾಲಿಕ ನೇಮಕಾತಿಗೆ ಸಂಬಂಧಿಸಿದಂತೆ ನಿರ್ದೇಶನಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದಕ್ಕಾಗಿ ಸಂಸ್ಥೆಗಳು ಹಲವು ರೀತಿಯ ನಮೂನೆಯನ್ನು ಅನುಸರಿಸುತ್ತಿದ್ದು, ಇದರಿಂದ ನಿರ್ದೇಶನಾಲಯದ ಹಂತದಲ್ಲಿ ಅನುಮೋದನೆಯ ಪ್ರಕ್ರಿಯೆ ಸುಲಭವಾಗುತ್ತಿಲ್ಲ. ಆದುದರಿಂದ, ಅರೆಕಾಲಿಕ ಉಪನ್ಯಾಸಕರ ನೇಮಕಾತಿ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲು ಏಕರೂಪ ಪದ್ಧತಿ ಅನುಸರಿಸುವ ಸಲುವಾಗಿ ಈ ಕೆಳಗೆ ತೋರಿಸಲಾಗಿರುವ ನಮೂನೆಗಳನ್ನು ಅನುಸರಿಸುವಂತೆ ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ / ಕಿರಿಯ ತಾಂತ್ರಿಕ ಶಾಲೆಗಳ ಪ್ರಾಚಾರ್ಯರಿಗೆ ಈ ಮೂಲಕ ಸೂಚಿಸಲಾಗಿದೆ. ಮುಂದುವರೆದು ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿದೆ.

...2

1. ಈ ಪತ್ರದೊಂದಿಗೆ ಲಗತ್ತಿಸಲಾಗಿರುವ ನಮೂನೆ –1 ಹಾಗೂ ನಮೂನೆ–2 ನ್ನು ಕಡ್ಡಾಯವಾಗಿ ತುಂಬಿ ಸಲ್ಲಿಸುವುದು. ಅಪೂರ್ಣವಾಗಿ ಸಲ್ಲಿಸಲಾಗುವ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದಿಲ್ಲ.

2. ಅರೆಕಾಲಿಕ ಉಪನ್ಯಾಸಕರ ನೇಮಕಾತಿ ಅನುಮೋದನೆಗಾಗಿ ಪ್ರಾಚಾರ್ಯರ ಪ್ರಸ್ತಾವನೆ, ನಮೂನೆ–1 ಮತ್ತು ನಮೂನೆ–2 ಹಾಗೂ ಅಭ್ಯರ್ಥಿಗಳ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಪದವಿ/ ಸ್ನಾತಕೋತರ ಪದವಿ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.

3. ಮಂಜೂರಾದ ಪೂರ್ಣಾವಧಿ ಉಪನ್ಯಾಸಕರ ಖಾಲಿ ಹುದ್ದೆಗೆದುರಾಗಿ (Clear Vacancy) **ಮಾತ್ರ** ಹಾಗೂ ಎಐಸಿಟಿಇ ನಿಯಮಗಳ ಪ್ರಕಾರ ಕಾರ್ಯಭಾರವನ್ನು ಪರಿಗಣಿಸಿ ಅರೆಕಾಲಿಕ ಅತಿಥಿ ಉಪನ್ಯಾಸಕರ ನೇಮಕಾತಿ ಮಾಡಿಕೊಳ್ಳಬೇಕೆಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ಇದನ್ನೂ ಮೀರಿ ಅರೆಕಾಲಿಕ ಉಪನ್ಯಾಸಕರ ನೇಮಕಾತಿ ಮಾಡಿಕೊಂಡಲ್ಲಿ ಅನುಮೋದನೆ ನೀಡಲಾಗುವುದಿಲ್ಲ ಹಾಗೂ ಮುಂದಿನ ಆಗುಹೋಗುಗಳಿಗೆ ಸಂಬಂಧಪಟ್ಟ ಪ್ರಚಾರ್ಯರನ್ನೆ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

4. ಅರೆಕಾಲಿಕ ಉಪನ್ಯಾಸಕರ ನೇಮಕಾತಿಗೆ ಅನುಮೋದನೆಯನ್ನು ಪೂರ್ಣ ಒಂದು ಶೈಕ್ಷಣಿಕ ವರ್ಷದ ಅವಧಿಗೆ ನೀಡಲಾಗುತ್ತಿದ್ದು, ಆದಾಗ್ಯೂ ಅನುಮೋದನೆ ನೀಡಲಾದ ಅವಧಿಗೂ ಮುನ್ನ ಯಾವುದೇ ಅರೆಕಾಲಿಕ ಉಪನ್ಯಾಸಕರು ಮಧ್ಯದಲ್ಲಿಯೇ ಬಿಟ್ಟು ಹೋದ ಸಂದರ್ಭದಲ್ಲಿ ಆ ಹುದ್ದೆಯೆದುರು ಬದಲಿ ಅಥವಾ ಹೊಸದಾಗಿ ಅರೆಕಾಲಿಕ ಉಪನ್ಯಾಸಕರನ್ನು ನೇಮಿಸಿಕೊಂಡಲ್ಲಿ, ಈ ಬಗ್ಗೆ ತಪ್ಪದೇ ನಿರ್ದೇಶನಾಲಯಕ್ಕೆ ಮಾಹಿತಿಯನ್ನು ಸಲ್ಲಿಸುವುದು. "ತತ್ಸಂಬಂಧ ಪ್ರತ್ಯೇಕ ಅನುಮೋದನೆ ಪಡೆಯುವ ಅಗತ್ಯವಿರುವುದಿಲ್ಲ".

ನಿರ್ದೇಶಕರು

ಇವರಿಗೆ:

1) ಪ್ರಾಚಾರ್ಯರು, ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳು ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು.
2) ಇ–ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3) ಕಛೇರಿ ಪ್ರತಿ.

# ನಮೂನೆ – 1

ಸಂಸ್ಥೆಯ ಹೆಸರು:

____-__ ನೇ ಸಾಲಿನ ಅರೆಕಾಲಿಕ ನೇಮಕಾತಿ ವಿವರ ಪಟ್ಟಿ

| ಕ್ರ.ಮ ಸಂ | ವಿಭಾಗ | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪೂರ್ಣಕಾಲಿಕ ಉಪನ್ಯಾಸಕರ ವಿವರ | ಈ ಸಾಲಿಗೆ ಪ್ರವೇಶ ಪಡೆದಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ (ವಿಭಾಗಾವಾರು) | ಎಐಸಿಟಿಇ ನಿಯಮಗಳ ಪ್ರಕಾರ ಪ್ರತಿ ವಿಭಾಗದಲ್ಲಿ ಬೋಧಿಸಬೇಕಾಗಿರುವ ಒಟ್ಟು ಯುನಿಟ್‌ಗಳು | ಕಾರ್ಯನಿರ್ವಹಿಸುತ್ತಿರುವ ಪೂರ್ಣಕಾಲಿಕ ಉಪನ್ಯಾಸಕರಿಗೆ ಹಂಚಲಾಗಿರುವ ಒಟ್ಟು ಯುನಿಟ್‌ಗಳು | ಕೊರತೆ ಬೀಳುವ ಒಟ್ಟು ಯುನಿಟ್‌ಗಳು | ಉಳಿಕೆ ಕಾರ್ಯಭಾರಕ್ಕೆ ಅನುಗುಣವಾಗಿ ನೇಮಕಾತಿ ಮಾಡಿಕೊಳ್ಳಲಾದ ಅತಿಥಿ ಉಪನ್ಯಾಸಕರ ಸಂಖ್ಯೆ | ಪ್ರಸ್ತುತ ನೇಮಕಾತಿ ಮಾಡಿಕೊಳ್ಳಲಾದ ಅತಿಥಿ ಉಪನ್ಯಾಸಕರ ಹೆಸರು | ವಿದ್ಯಾರ್ಹತೆ ಹಾಗು ಪಡೆದ ದರ್ಜೆ | ವಯಸ್ಸು | ಅತಿಥಿ ಉಪನ್ಯಾಸಕರಿಗೆ ಹಂಚಲಾದ ಒಟ್ಟು ಯೂನಿಟ್‌ಗಳು | ನೇಮಕಾತಿ ಅವಧಿ | ಭಾವಚಿತ್ರ |
|---|---|---|---|---|---|---|---|---|---|---|---|---|---|
| (1) | (2) | (3) | (4) | (5) | (6) | (7) | (8) | (9) | (10) | (11) | (12) | (13) | (14) |
| | | | | | | | | | | | | | |
| | | | | | | | | | | | | | |
| | | | | | | | | | | | | | |

- ಬೇರೆ ಸಂಸ್ಥೆಯಿಂದ ನಿಯೋಜನೆಗೊಂಡು ಕಾರ್ಯನಿರ್ವಹಿಸುತ್ತಿರುವ ಪೂರ್ಣಕಾಲಿಕ ಉಪನ್ಯಾಸಕರನ್ನು ಕಲಂ (3) ರಲ್ಲಿ ಅವರ ಹೆಸರಿನ ಮುಂದೆ ನಿಯೋಜನೆ ಎಂದು ನಮೂದಿಸತಕ್ಕದ್ದು.

ಪ್ರಾಚಾರ್ಯರು

(ಸಹಿ ಹಾಗೂ ಕಾಲೇಜಿನ ಮುದ್ರೆ)

# <u>ನಮೂನೆ-2</u>

ಸಂಸ್ಥೆಯ ಹೆಸರು:

____-__ನೇ ಸಾಲಿನ ಅರೆಕಾಲಿಕ ನೇಮಕಾತಿ ವಿವರ ಪಟ್ಟಿ

| ಕ್ರ.ಮ ಸಂ | ವಿಭಾಗ | ಮಂಜೂರಾದ ಪೂರ್ಣಾವಧಿ ಹುದ್ದೆಗಳ ವಿವರ | ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ | ಖಾಲಿ ಇರುವ ಸಂಖ್ಯೆ | ಅನುಮೋದನೆ ಕೋರಲಾಗುತ್ತಿರುವ ಅರೆಕಾಲಿಕ ಉಪನ್ಯಾಸಕರ ಸಂಖ್ಯೆ | ಷರಾ |
|---|---|---|---|---|---|---|
| (1) | (2) | (3) | (4) | (5) | (6) | (7) |
| | | | | | | |
| | | | | | | |
| | | | | | | |
| | | | | | | |
| | | | | | | |

<u>ಸೂಚನೆ</u>: – ಒಂದು ವಿಭಾಗದಲ್ಲಿ ಖಾಲಿ ಇರುವ ಹುದ್ದೆಯೆದುರು ಇನ್ನೊಂದು ವಿಭಾಗಕ್ಕೆ ಅರೆಕಾಲಿಕ ಅತಿಥಿ ಉಪನ್ಯಾಸಕರ ನೇಮಕಾತಿ ಮಾಡಿಕೊಂಡಲ್ಲಿ, ಅದನ್ನು ತಪ್ಪದೇ ಕಲಂ (7) ರಲ್ಲಿ ನಮೂದಿಸುವುದು.

ಪ್ರಾಚಾರ್ಯರು
(ಸಹಿ ಹಾಗೂ ಕಾಲೇಜಿನ ಮುದ್ರೆ)